ಮುಂದೆ ಮೈ ಕಾಯಿಸಿಕೊಂಡರು. ದಣಿವು, ಬೀಸಿನೀರಿನ ಸ್ನಾನ, ಹಸಿದ ಹೊಟ್ಟೆಗೆ ಬಿದ್ದ ಬಿಸಿ ಆಹಾರ ಇವೆಲ್ಲ ಅವರಿಗೆ ಮಂಪರು ತರತೊಡಗಿತ್ತು. ನೆಲದ ಮೇಲೆ ಬಿದ್ದುಕೊಂಡರೆ ಸಾಕು ಎನ್ನಿಸುವ ಸುಸ್ತಿನಲ್ಲೂ ಕ್ಷಣ ಕ್ಷಣಕ್ಕೂ ಬೆಳಗಿನಿಂದ ಮಾಡಿದ ಓಡಾಟ, ದಿಕ್ಕು ತಪ್ಪಿದ ವಿಹ್ವಲ ಸ್ಥಿತಿ, ಅಲ್ಲಿಂದ ಇಲ್ಲಿಯವರೆಗೆ ಬಂದ ದಾರುಣ ಸನ್ನಿವೇಶ ನೆನಪಾಗುತ್ತಿತ್ತು. ಆ ಕಗ್ಗಾಡಿನಲ್ಲೇ ಈ ಹೊತ್ತಿನಲ್ಲಿ ಇದ್ದಿದ್ದರೆ ಏನಾಗುತ್ತಿತ್ತು? ಎನ್ನುವ ಆಲೋಚನೆ ಬರುತ್ತಿತ್ತು.

ಒಂದು ಕೈಯಲ್ಲಿ ಲಾಂದ್ರ, ಇನ್ನೊಂದರಲ್ಲಿ ತಾಮ್ರದ ಚೊಂಬಿನ ಜೊತೆ ಲೋಟ ಹಿಡಿದುಬಂದ ಮೂರ್ತಿರಾಯರು, 'ಇದು ಕಾಳುಮೆಣಸಿನ ಕಷಾಯ. ಮೈನೋವು ಕಡಿಮೆ ಮಾಡುತ್ತದೆ. ಜಗಲಿಯಲ್ಲಿ ಹಾಸಿಗೆ ಹಾಸಿದ್ದೇನೆ. ಸುಸ್ತಾಗಿದ್ದೀರಾ, ಮಲಗಿಕೊಳ್ಳಿ' ಎಂದು ತಮ್ಮದೇ ಆದ ಧ್ವನಿಯಲ್ಲಿ ಹೇಳಿ ಒಳಹೋಗಿ ವೀಳ್ಯದೆಲೆ, ಅಡಿಕೆ ಹೋಳು, ಸುಣ್ಣದ ಮತ್ತು ತಂಬಾಕಿನ ಡಬ್ಬಿಯಿದ್ದ ಬೆತ್ತದ ಸಣ್ಣ ಸಿಬ್ಬಲು ಹಿಡಿದು ಬಂದು ಬೆಂಕಿಯಿಂದ ತುಸು ದೂರದ ಕಟ್ಟೆಯ ಮೇಲೆ ಕೂತು, 'ಕವಳ, ಅಂದರೆ ಎಲೆ ಅಡಿಕೆ ಹಾಕುತ್ತೀರಾ?' ಎಂದರು.

ಕಟುವಾದ, ಖಾರ, ಸಿಹಿ ಮಿಶ್ರಿತ ಕಷಾಯವನ್ನು ಗುಟುಕರಿಸುತ್ತಿದ್ದಾಗ ಸಂತೋಷನಿಗೆ ಏಕಾಏಕಿ ಪ್ರಶ್ನೆಯೊಂದು ಹುಟ್ಟಿಕೊಂಡಿತು. 'ಮೂರ್ತಿರಾಯ ಎನ್ನುವ ಈ ವ್ಯಕ್ತಿ ಅಪರಿಚಿತರಾದ ನಮ್ಮ ಬಗ್ಗೆ

